# ಸಾಹಿತ್ಯ ವಿಮರ್ಶೆಯ ತಕ್ಕಡಿ ಎಲ್ಲಿ ವಾಲಿಕೊಂಡಿಲ್ಲ?

ಆಧುನಿಕ ಜಗತ್ತಿನ ಸಾಮಾಜಿಕ ಚಿಂತನೆಯಲ್ಲಿ ಮಹಿಳಾ ಸಮಾನತೆಯ ಚರ್ಚೆ ಸೇರಿದ ಹಾಗೆ, ಸಾಹಿತ್ಯ ಚಿಂತನೆಯಲ್ಲಿ ಮಹಿಳಾ ಸಂವೇದನೆಯ ಮಹತ್ವದ ಮಾತು ಸೇರಿ ಬಹಳ ಕಾಲವಾಯಿತು. ಅಂದಿನಿಂದ ಅವುಗಳನ್ನು ಅಲ್ಲಗಳೆಯುವ ಪ್ರಯತ್ನವೂ ನಿರಂತರವಾಗಿ ನಡೆದಿದೆ. ಮಹಿಳೆಯರು ಬರೆದ ಸಾಹಿತ್ಯವನ್ನು 'ಲೋಯರ್ ಶೆಲ್ಫ್' ಗೆ ತುರುಕುವ ಕೆಲಸ ಯಾವ ಭಾಷೆಯಲ್ಲಿ ನಡೆಯುತ್ತಿಲ್ಲ? ಗಂಡಸಿನ ಹೆಸರಲ್ಲಿ ಬರೆದರೆ ಮಾತ್ರ ಕಾದಂಬರಿಯ ಕೋಟಿಗಟ್ಟಲೆ ಪ್ರತಿಗಳು ಖರ್ಚಾಗುತ್ತವೆ ಎಂದು ಮಹಿಳೆಯೊಬ್ಬಳು ಭಾವಿಸುವುದಕ್ಕೆ ಇಂದೂ ಉದಾಹರಣೆ ಇದೆಯಲ್ಲ? ಸಾಹಿತ್ಯ ವಿಮರ್ಶೆಯ ತಕ್ಕಡಿ ಎಲ್ಲಿ ವಾಲಿಕೊಂಡಿಲ್ಲ?

ಆದರೆ ಏನು ಮಾಡೋಣ, ಇರುವುದನ್ನು ಮರೆಮಾಡಬಹುದಷ್ಟೇ ಹೊರತು, ಇಲ್ಲವಾಗಿಸಲು ಇವುಗಳಿಗೆ ಸಾಧ್ಯವಾಗಿಲ್ಲ! ಸಾಹಿತ್ಯ ಸೇರಿ ಎಲ್ಲ ರಂಗಗಳಲ್ಲಿ ಕಾಣುವ ಈ ಅಸಮಾನತೆ, ಅನ್ಯಾಯಗಳ ಬಗ್ಗೆ ಮಹಿಳೆಯರು ಪ್ರಬಲ ತಾತ್ವಿಕ ಪ್ರತಿರೋಧ ವ್ಯಕ್ತಪಡಿಸುವುದು ಜಗತ್ತಿನ ಹಲವು ಭಾಷೆಗಳ ಸಾಹಿತ್ಯಗಳಲ್ಲಿ ಎದ್ದು ಕಾಣುತ್ತದೆ. ಕೆಲವರಂತೂ ಇದನ್ನು ಹೋರಾಟದ ಮಟ್ಟಕ್ಕೆ ತಂದಿದ್ದಾರೆ.

ಆದರೆ ನಮ್ಮ ಕನ್ನಡದ ಲೇಖಕಿಯರು ಏನನ್ನುತ್ತಾರೆ? 'ಮಹಿಳಾ ಸಾಹಿತ್ಯ' ಎಂದು ಚರ್ಚಿಸುವುದೇ ಅವಮಾನ ಎಂಬ ಭಾವನೆ ಕೆಲವರಲ್ಲುಂಟು; ಆದರೆ, ತಮ್ಮ ಸಾಹಿತ್ಯಸೃಷ್ಟಿಗೆ ವಿಮರ್ಶಕರ (ಅರ್ಥಾತ್ ಗಂಡಸರ) ಮನ್ನಣೆ ಸಿಕ್ಕಿಲ್ಲ ಎಂಬ ಕೊರಗು ಮಾತ್ರ ಎಲ್ಲರಲ್ಲುಂಟು. ತಮಗೆ ಯಾವುದೇ ಬಗೆಯ ಸಾಮಾಜಿಕ 'ಅಸ್ಮಿತೆ' ಬೇಡ ಎಂಬ ತಿರಸ್ಕಾರ ಅನೇಕರಲ್ಲಿ ಇದೆ; ಆದರೆ ಅದೇ ನೆಲೆಯಲ್ಲಿ ಸಿಗುವ ಪುರಸ್ಕಾರಗಳಿಗೆ ಸ್ವಾಗತ ಇದ್ದೇ ಇದೆ. ಸಿದ್ಧಾಂತಗಳ ರಾದ್ಧಾಂತದಿಂದ ದೂರವಿರುವ ನಿಲುವು ಸಾರ್ವತ್ರಿಕ; ವಿಚಾರ ಎಂಬ 'ಪದ'ವಂತೂ ಗೋಷ್ಠಿಗಳು, ಸಂಕಿರಣಗಳ ಮುಂಪ್ರತ್ಯಯವಾಗಿ ಸೀಮಿತ – ಇಂಥ ಟೀಕೆಟಿಪ್ಪಣಿಗಳು ಹಲವಾರು.

ನೆಪನಿಮಿತ್ತಗಳ ಹೆಸರಿನಲ್ಲಿ ಜನಕ್ಕೆ ಮತ್ತು ಮನಕ್ಕೆ ಬೇಕಾದುದರ ಬಗ್ಗೆ ಚರ್ಚಿಸುವುದರಲ್ಲಿ ತಪ್ಪೇನಿದೆ? ಆರಂಭದಿಂದಲೂ ಮಹಿಳಾ ಅಭಿವ್ಯಕ್ತಿಗೆ ಮುಕ್ತ ವೇದಿಕೆಯಾಗಿರುವ 'ಮಯೂರ', ಈ ಮಹಿಳಾ ದಿನ ಅಂಥ ಚಿಂತನೆಗೆ ಪ್ರೇರೇಪಿಸಲಿ ಎಂದು ಆಶಿಸುತ್ತದೆ.

**ಆರ್. ಪೂರ್ಣಿಮಾ**

ವೆಂಕಿ ಕಾಮತ್

